ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋಕೋ, ಬೆಂಗಳೂರು ವಿಭಾಗ,
ಲೋಕೋ ಅನೆಕ್ಸ್ ಕಟ್ಟಡ 2ನೇ ಮಹಡಿ
ಕೆ.ಆರ್. ವೃತ್ತ ಬೆಂಗಳೂರು 01

ದೂರವಾಣಿ : 080-22133370
ಫ್ಯಾಕ್ಸ್: 080-22133365
ಇ
ಮೇಲ್:eepwdbngdn@yahoo.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾಅ/ಪಂ:ಬೆಂವಿ:ಎಇ-1:2022-23/ ೨546 ದಿ: ೨9/8/22

ರವರಿಗೆ:- "ನೊಂದಾಯಿತ ಅಂಚೆ ಮತ್ತು ಸ್ವೀಕೃತಿ"

**President,**
**Sri Sriram Educational Trust,**
**Harvest International School**
Sy No. 56/1B, Kodathi Villae,
Carmalaram Post, Off Sarjapura Main Road,
Near Silk form, Bangalore – 560036.

ಮಾನ್ಯರೇ,

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮ ಕರ್ಮಲರಾಮ್ ಪೋಸ್ಟ್, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು – 560036 ರಲ್ಲಿರುವ **Sri Sriram Educational Trust, Harvest International School** ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ:
1. ದಿನಾಂಕ: 19.09.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
2. ಸರ್ಕಾರದ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 07.05.2022
3. ತಮ್ಮ ಕಛೇರಿಯ ಪತ್ರ ದಿನಾಂಕ: 10.08.2022
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: 2022-23/471 ದಿನಾಂಕ: 23.08.2022

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮ ಕರ್ಮಲರಾಮ್ ಪೋಸ್ಟ್, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು – 560036 ರಲ್ಲಿರುವ **Sri Sriram Educational Trust, Harvest International School** ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (3) ರ ಪತ್ರದಲ್ಲಿ ಕೋರಿರುತ್ತೀರಿ.

ರಿಟ್ ಪಿಟೀಷನ್ (ಸಿವಿಲ್) ಸಂ: 484 (2004) ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಲಾದ ಜಡ್ಜ್‌ಮೆಂಟ್‌ನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರವರು ಶಾಲಾ/ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ **"Structurally Stable Certificate"** ಅನ್ನು ನೀಡಲು ಆದೇಶಿಸಿರುವುದರಿಂದ ಹಾಗೂ ಉಲ್ಲೇಖ (1) ರ ಸಭಾ ನಡವಳಿಯ ನಿರ್ದೇಶನದಂತೆ ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural Evaluation) ಮೌಲ್ಯಮಾಪನ ಮಾಡಿಸಿ National Building code ಮಾನದಂಡಗಳ ಅನ್ವಯ ಪ್ರಮಾಣ ಪತ್ರ ನೀಡಲು ಸೂಚಿಸಿರುವುದರಿಂದ ಪ್ರಸ್ತಾಪಿತ ಕಟ್ಟಡದ ಸ್ಟ್ರಕ್ಚರಲ್ ಪರೀಕ್ಷೆಗಳನ್ನು ನಡೆಸಿ ಈ ಕೆಳಕಂಡಂತೆ ವರದಿ ನೀಡಲಾಗಿದೆ.

ಸದರಿ ಕಟ್ಟಡದ ನಕ್ಷೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡತಿ ಗ್ರಾಮ ಪಂಚಾಯಿತಿ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ರವರು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡವು ನೆಲಮಹಡಿ ಮತ್ತು ಮೂರು ಮೇಲ್ಮಹಡಿಗಳನ್ನು ಒಳಗೊಂಡಿದ್ದು 2011-12 ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.

ಮುಂದುವರೆದು, ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಶಾಲಾ ಸಂಸ್ಥೆಯವರು ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ ದಿನಾಂಕ: 08.08.2022 ರಂದು **Karnataka Test House Pvt. Ltd., #778/44, Gokula 1st Stage, 2nd Phase, 8th Cross, Triveni Road, Yeshwanthpur, Bangalore-560054** ಮುಖಾಂತರ ಪರೀಕ್ಷೆಗಳನ್ನು ಕೈಗೊಂಡಿರುವ ಪರೀಕ್ಷಾ ವರದಿಯ ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಸಲ್ಲಿಸಿರುತ್ತಾರೆ. ಸದರಿ ನಡೆಸಲಾದ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷಣೆ ಪ್ರಮಾಣ ಪತ್ರವನ್ನು ವಿತರಿಸಲು ಮೊತ್ತ ರೂ. 5,000/- (ರೂ. ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮ ಕರ್ಮಲರಾಮ್ ಪೋಸ್ಟ್, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು – 560036 ರಲ್ಲಿರುವ **Sri Sriram Educational Trust, Harvest International School** ರವರು kotak Bank, ಡಿ.ಡಿ. ಸಂಖ್ಯೆ 19.08.2022 ರಲ್ಲಿ ಪಾವತಿಸಿರುತ್ತಾರೆ.

For Harvest International School
Chairman

A.N. SURYAVATHY
PRINCIPAL
HARVEST INTERNATIONAL SCHOOL
BANGALORE- 560 EAST : 560 035.
CBSE/AFF/SL-01109/1213/830434/2012

- **Sri Sriram Educational Trust, Harvest International School** ಕಟ್ಟಡವನ್ನು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ವರ್ತೂರು ಹೋಬಳಿ, ಕೊಡತಿ ಗ್ರಾಮ, ಕರ್ಮಲರಾಮ್ ಪೋಸ್ಟ್, ಸರ್ಜಾಪುರ ಮುಖ್ಯರಸ್ತೆ, ಬೆಂಗಳೂರಿನಲ್ಲಿ ನಿರ್ಮಿಸಲಾಗಿರುತ್ತದೆ ಎಂದು ಶಾಲಾ ಸಂಸ್ಥೆಯವರು ಮನವಿ ಪತ್ರದಲ್ಲಿ ವರದಿಸಿರುತ್ತಾರೆ.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡತಿ ಗ್ರಾಮ ಪಂಚಾಯಿತಿ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ರವರಿಂದ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.
- **P.G. Sowmya, Aikya Architects, Bangalore No: BCC/BL-3.6/A-2804/2017-18** ರವರು ನೀಡಿರುವ FORM FOR CERTIFICATE FOR SUB SURFACE INVESTIGATION (Annex-1) ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ.
- **P.G. Sowmya, Aikya Architects, Bangalore No: BCC/BL-3.6/A-2804/2017-18** ರವರು ನೀಡಿರುವ CERTIFICATE FOR COMPLETED STRUCTURAL DESIGN WORK AS PER STRUCTURAL SAFETY REQUIREMENTS ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ. (Annex-2)
- **P.G. Sowmya, Aikya Architects, Bangalore No: BCC/BL-3.6/A-2804/2017-18** ರವರು ನೀಡಿರುವ CERTIFICATE FOR COMPLETED STRUCTURAL WORK BY BUILDER/CONSTRUCTOR ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ. (Annex-3)
- **P.G. Sowmya, Aikya Architects, Bangalore No: BCC/BL-3.6/A-2804/2017-18** ರವರು ನೀಡಿರುವ CERTIFICATE FOR SUPERVISION OF WORK ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ. (Annex-4)
- **P.G. Sowmya, Aikya Architects, Bangalore No: BCC/BL-3.6/A-2804/2017-18** ರವರು ನೀಡಿರುವ COMPLETION CERTIFICATE ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ. (Annex-5)
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೊಡತಿ ಗ್ರಾಮ ಪಂಚಾಯಿತಿ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ರವರು ನೀಡಿರುವ **Form for occupancy permit** ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ. (Annex-6)

ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ದಿನಾಂಕ:22-08-2022 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಲಾಗಿ, ಕಟ್ಟಡವು ಸದೃಢವಾಗಿರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಸ್ಥಳದಲ್ಲಿ ಸೂಚಿಸಿರುವಂತೆ, ಶೌಚಾಲಯಗಳಿಗೆ ಗಾಳಿ ಬೆಳಕಿನ ಕೊರತೆಯಿದ್ದು, ಗಾಳಿ ಬೆಳಕು ಸರಿಯಾಗಿ ಬರುವಂತೆ ಕ್ರಮ ಕೈಗೊಳ್ಳಬೇಕಿರುತ್ತದೆ ಹಾಗೂ ಕಟ್ಟಡದ ತರಗತಿಗಳಲ್ಲಿನ ಮೂಲೆಗಳಲ್ಲಿ (S/W & N/W) ತಾರಸಿಯು ತೇವಾಂಶದಿಂದ ಕೂಡಿರುವುದು ಕಂಡುಬಂದಿರುತ್ತದೆ ಮತ್ತು ಮೂರನೇ ಮಹಡಿಯಲ್ಲಿ ಶೀಟಿನ ಛಾವಣಿಯ ನೀರು ಡಿಸೈನ್ ಪಾರಾಪೆಟ್ ಒಳಭಾಗದಲ್ಲಿ ಬಿದ್ದು ಪ್ಯಾರಾಪೆಟ್ ಮುಖಾಂತರ ಹೊರ ಸೋರುತ್ತಿರುವುದನ್ನು ಪರಿವೀಕ್ಷಣಾ ಸಮಯದಲ್ಲಿ ಗಮನಿಸಲಾಗಿರುತ್ತದೆ. ಈ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಶಾಲೆಯನ್ನು ನಡೆಸುವ ಷರತ್ತಿಗೆ ಒಳಪಟ್ಟು ನಿರಾಕ್ಷೇಪಣಾ ಪತ್ರವನ್ನು ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, **Karnataka Test House Pvt. Ltd., #778/44, Gokula 1st Stage, 2nd Phase, 8th Cross, Triveni Road, Yeshwanthpur, Bangalore-560054** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪರೀಕ್ಷಾ ವರದಿಯನ್ನು ಪರಿಗಣಿಸಿ ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡ ನೀಡಿರುವ ವರದಿಯನ್ವಯ, ಮೇಲ್ಕಂಡ ನ್ಯೂನತೆಯನ್ನು ಸರಿಪಡಿಸುವ ಷರತ್ತಿಗೊಳಪಟ್ಟು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮ ಕರ್ಮಲರಾಮ್ ಪೋಸ್ಟ್, ಸರ್ಜಾಪುರ ಮುಖ್ಯ ರಸ್ತೆ, ಬೆಂಗಳೂರು – 560036 ರಲ್ಲಿರುವ **Sri Sriram Educational Trust, Harvest International School** ಕಟ್ಟಡವು ಪ್ರಸಕ್ತ ಶೈಕ್ಷಣಿಕ ಸಾಲಿಗೆ **Structurally Stable** ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಉಳಿದಂತೆ, ಪ್ರಸ್ತಾಪಿತ ಕಟ್ಟಡದ Non - Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಮನಶ್ಶಾಸ್ತ್ರಜ್ಞ, ಅಗ್ನಿಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನ್ನೊಳಗೊಂಡ ಪರೀಕ್ಷಾ ತಂಡದವತಿಯಿಂದ ಪರಿಶೀಲಿಸಿ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯಿಂದ ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ಲೋಇ., ಬೆಂಗಳೂರು ವಿಭಾಗ,
ಬೆಂಗಳೂರು.

For Harvest International School

Chairman

A.N. SURYAVATHY
PRINCIPAL
HARVEST INTERNATIONAL SCHOOL
BANGALORE- 560 EAST : 560 035.
CBSE/AFF/SL-01109.1213/830434/2012